ಶ್ರೀ ಬಿ ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಾನು ಒಂದು ಮಹತ್ವರವಾದ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕಳಿಸಿದ್ದೇನೆ.

ಅಧ್ಯಕ್ಷರು.—ನೀವು ಸ್ವಲ್ಪ ತಡಿರೀ, ನೀವು ಹೇಳುವುದನ್ನೂ ಸಮಾಧಾನದಿಂದ ಹೇಳುವುದನ್ನು ಕಲಿಯಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆಯಿತು ಸಾರ್.

ಸಭೆಯಂ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು) —ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧(ಎ)ನೇ ಕಲಮಿನ ಮೇರೆಗೆ ೧೯೮೫–೮೬ನೇ ಇಸವಿಯ ಕರ್ನಾಟಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಜೀವರಾಜ ಆಳ್ವರವರ ಹೆಸರಿನ ಮುಂದಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ ೧೯೭೬ ೪೨(೩)ನೇ ಕಲಮಿನ ಫೋರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ೧೯೮೪–೮೫ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಮೇಲ್ಕಂಡ ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಮಾನ್ಯ ಯಡಿಯೂರಪ್ಪನವರೇ, ಗಮನ ಸೆಳೆಯುವ ಸೂಚನೆ ಬರುವುದಕ್ಕೆ ಮುಂಚೆ ನಿಮ್ಮ ನಿಲುವಳಿ ಸೂಚನೆ ಬಗ್ಗೆ ಹೇಳಿ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಸೊರಬ ತಾಲ್ಲೂಕು ತುಮ್ಕೂರು ಗ್ರಾಮದಲ್ಲಿ ಭೋವಿ ಜನಾಂಗದ ಚಂದ್ರಪ್ಪನಿಗೆ ಮಂಲ ಹಚ್ಚಿದ ಚಪ್ಪಲಿಯನ್ನು ಬಾಯಲ್ಲಿ ತುರುಕಿಸಿದ ಘಟನೆಯ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) —ಮಾನ್ಯ ಅಧ್ಯಕ್ಷರೇ, ಸೊರಬ ತಾಲ್ಲೂಕು, ತುಮ್ಕೂರು ಗ್ರಾಮದಲ್ಲಿ ೨೯–೧–೮೮ರಂದು ಸಾಯಂಕಾಲ ೫ ಗಂಟೆಗೆ, ಚಂದ್ರಪ್ಪ ಎಂಬ ಭೋವಿ ಜನಾಂಗದವನ ಹೆಂಡತಿ ದೇವರ ಪೂಜೆಗೋಸ್ಕರ. ದೇವಸ್ಥಾನಕ್ಕೆ ಹೋದಾಗ, ಅದಕ್ಕೆ ಅವಕಾಶ ಮಾಡಿ ಕೊಡಲಿಲ್ಲ ಅದಕ್ಕೋಸ್ಕರ ಆ ಹೆಂಗಸು ಕಣ್ಣೀರು ಹಾಕಕೊಂಡು ಮನೆಗೆ ಬಂದು ದೇವರ ಪೂಜೆಗೆ ಅವಕಾಶ ಮಾಡಿಕೊಡಲಿಲ್ಲ ಎಂಬ ಸಂಗತಿಯನ್ನು ತನ್ನ ಗಂಡನಿಗೆ ಹೇಳಿದಳು. ಆಗ ಚಂದ್ರಪ್ಪ ಬಂದು ದೇವರ ಪೂಜೆಗೆ ಅವಕಾಶ ಮಾಡಿಕೊಡುವವರೆಗೆ ಈ ಸ್ಥಳ ಬಿಟ್ಟು ಹೋಗುವುದಿಲ್ಲ ಎಂದು ದೇವಸ್ಥಾನದ ಹತ್ತಿರ ಸತ್ಯಾಗ್ರಹದ ರೂಪದಲ್ಲಿ ಧರಣಿ ಕುಳಿತುಕೊಂಡ ಮೇಲೆ, ಆ ಊರಿನ ಕೆಲವು ಪ್ರಮುಖರು ಬಂದು ಅವನ ಮೇಲೆ ಹಲ್ಲೆ ಮಾಡಿ ಚಪ್ಪಲಿಯಲ್ಲಿ ಹೊಡೆದು, ಮಲವನ್ನು ಹಚ್ಚಿದಂಥ ಚಪ್ಪಲಿಯನ್ನು ಅವನ ಬಾಯಿಗೆ ತುರುಕಿದರು. ಮಾನವೀಯತೆಗೆ ಕಳಂಕ ತರುವಂತಹ ಘಟನೆ ನಡೆದಿದೆ ಎಂದು ವರದಿ ಬಂದಿದೆ. ''ದೇವರ ಪೂಜೆ ಬೇಕೆಂದವನಿಗೆ ಸಿಕ್ಕಿದ್ದು ಮಲ ಮೆತ್ತಿಸಿದ ಮೆಟ್ಟಿನ ಹೊಡೆತ'' ಎಂದು ಶಿಳಿದು ಬಂದಿದೆ. ನಾನು ನಿಲುವಳಿ ಸೂಚನೆಗೆ ಆಗ್ರಹ ಮಾಡುತ್ತಿರುವ ಒಂದೇ ಒಂದು ಉದ್ದೇಶ ಎಂದರೆ, ಈ ಘಟನೆಯಲ್ಲಿ ಸತ್ಯಾಂಶ ಇಡಗಿದ್ದರೆ, ಇದು ಸತ್ಯವಾದ ಘಟನೆಯಾದರೆ ಇದರ ಬಗ್ಗೆ ಚರ್ಚೆ ಆಗಬೇಕು. ಹಿಂದೆ ತಮಗೆ ಗೊತ್ತಿರುವ ಹಾಗೆ ಬೆಂಡಿಗೇರಿಯಲ್ಲಿ ನಡೆದಿರುವ ಘಟನೆ ಆದ ಮೇಲೆ ಈಗ ತತ್ತೂರಿನಲ್ಲಿ ನಡೆದಿದೆ. ಮಾನವೀಯತೆಗೆ ಕಳಂಕ ತರುವ ಘಟನೆ ನಡೆದಿದೆ. ಈ ಘಟನೆ ನಡೆದಿರುವುದು ೨೯–೧–೮೮ರಂದು.....

ಅಧ್ಯಕ್ಷರು.—ಇದನ್ನೆಲ್ಲಾ ತಮಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಮೇಲೆ ಹೇಳಿ. ಈಗ ಇದು ಮಹತ್ವದ ಘಟನೆ, ಮಾತನಾಡಲು ಅವಕಾಶ ಮಾಡಿಕೊಡಬೇಕು ಎಂದಷ್ಟೇ ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ತುಂಬಾ ಮಹತ್ವದ ವಿಷಯ ಎಂದು ತಾವು, ಬೇರೆ ಯಾವ ರೀತಿಯಲ್ಲೂ ಕನ್‌ವರ್ಟ್ ಮಾಡದೇ, ಇದನ್ನು ನಿಲುವಳಿ ಸೂಚನೆಯಾಗಿಯೇ ತೆಗೆದು ಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಈ ರೀತಿ ಅಮಾನುಷವಾದ ಘಟನೆ ಗಳು ರಾಜ್ಯದಲ್ಲಿ ಅನೇಕ ಬಾರಿ ನಡೆಯುತ್ತಿವೆ. ನೇರವಾಗಿ ನಾನು ಆರೋಪ ಮಾಡುವುದು ಇಷ್ಟೇ, ಈ ಘಟನೆ ಏನು ೨೦ನೇ ತಾರೀಖು ನಡೆದ ಮೇಲೆ ೩೦ನೇ ತಾರೀಖು ಆತ ಮಂಡಲ್ ಪಂಚಾಯತ್ ಮುಂದೆ ಧರಣಿ ಸತ್ಯಾಗ್ರಹ ಮಾಡಿದ ಮೇಲೆ, ಪೋಲೀಸರ ಗಮನಕ್ಕೆ ಇದು ಬಂದ ಮೇಲೆ ಅವನು ಕಂಪ್ಲೇಂಟ್ ಕೊಟ್ಟಿದ್ದಾನೆ. ಇಷ್ಟೆಲ್ಲಾ ಆಗಿದ್ದರೂ ಇದು ಅವರ ಗಮನಕ್ಕೆ ಬಂದಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ಇದು ಪತ್ರಿಕೆಯಲ್ಲಿ ಬರದೇ ಹೋಗಿದ್ದರೆ, ಈ ಸದಸ್ಯಕ್ಕೆ, ಸದಸ್ಯರಿಗೆ ಗೊತ್ತಾಗುತ್ತಿರಲಿಲ್ಲ ನಾನು ಸನ್ಮಾನ್ಯ ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು, ಹರಿಜನ ಗಿರಿಜನರ ಬಗ್ಗೆ ತಮಗೆ ಕಳಕಳಿ ಇದ್ದರೆ ತಾವು ಏತಕ್ಕೆ ಘಟನೆ ನಡೆದು ನಾಲ್ಕೈದು ದಿವಸ ಗಳಾದರೂ ಆ ಸ್ಥಳಕ್ಕೆ ಹೋಗಲಿಲ್ಲ ಹೆಲಿಕ್ಯಾಪ್ಟರ್ ಇರುವುದು ಸಾರ್ವಜನಿಕ ಸಮಾರಂಭಗಳಿಗೆ ಹೋಗುವುದಕ್ಕೆ ಮಾತ್ರವೇ? ಅದನ್ನು ಉಪಯೋಗಿಸಿಕೊಂಡು ಈ ಘಟನೆ ಆದ ಜಾಗಕ್ಕೆ ಹೋಗಿ ನೋಡಿಕೊಂಡು ಬರಬೇಕಾಗಿತ್ತು, ಹರಿಜನ ಗಿರಿಜನರ ಮೇಲೆ ಅಮಾನುಷವಾದಂಥ ಘಟನೆ ನಡೆಯುತ್ತಿದೆ, ಆದರೂ ಸಹ ಈ ಸರಕಾರಕ್ಕೆ ಮತ್ತು ಸಚಿವರಿಗೆ ಅದರ ಬಗ್ಗೆ ಕಳಕಳಿ ಇಲ್ಲ. ಈ ರೀತಿಯ ಘಟನೆಗಳು ಪುನರಾವರ್ತನೆಯಾಗುತ್ತಿದ್ದರೂ ಸಹ ತಾವು ಸ್ಥಳಕ್ಕೆ ಹೋಗಲಿಲ್ಲ.....

ಅಧ್ಯಕ್ಷರು.—ನಾನು ನಿಮಗೆ ಹೇಳಿದ್ದು ಏನು? ಇದರ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದೆ ಮಾತ್ರ ಹೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲ ಸ್ವಾಮಿ, ಇದು ಪತ್ರಿಕೆಯಲ್ಲಿ ಬರುವವರೆಗೆ ನಾವು ಕಾಯಬೇಕೇ?

ಅಧ್ಯಕ್ಷರು.—ಅಡ್‌ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಮಾಡಿಕೊಡಿ ಎಂದು ಹೇಳಿದಿರಲ್ಲ ಅಷ್ಟು ಸಾಕು, ವೆಂಕಟರಾಮಯ್ಯನವರೇ ತಾವೂ ಅಷ್ಟೇ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಸ್ವಾಮಿ, ಸೊರಬ ತಾಲ್ಲೂಕಿನ ತತ್ತೂರ್ ಗ್ರಾಮದಲ್ಲಿ ನಡೆದಿರುವ ಅಮಾನುಷ ಘಟನೆಯಂತಹ ಘಟನೆ ಹಿಂದೆ ಬೆಂಡಿಗೇರಿಯಲ್ಲಿ ಆಗಿತ್ತು, ಆದರೂ ಇವರಿಗೆ ಬುದ್ಧಿ ಬರಲಿಲ್ಲ. ನಮ್ಮ ಸಮಾಜದ ವ್ಯವಸ್ಥೆಯೇ ಇಂತಹದು ಎಂದು ಕಾಣುತ್ತದೆ ಸಮಾಜ ದಲ್ಲಿ ಕೆಲವು ಪ್ರತಿಷ್ಠಿತ ಜಾತಿಗಳು ಮೊದಲಿನಿಂದಲೂ ಹರಿಜನರನ್ನು ತುಳಿಯುವುದು ಒಂದು ಮಾಡಿಕೆ ಯಾಗಿ ಬಂದು ಬಿಟ್ಟಿದೆ. ಇವರಿಗೆ ಬುದ್ಧಿ ಬರುವುದಿಲ್ಲ. ಇದಕ್ಕೋಸ್ಕರ ಬೇಕಾದಷ್ಟು ಜನ ಅಧಿಕಾರಿ ಗಳು ಇದ್ದಾರೆ, ನಮ್ಮ ಜಾಲಪ್ಪನವರೂ ಸಹ ಹಿಂದುಳಿದವರ್ಗದವರು.....

ಅಧ್ಯಕ್ಷರು.—ಬೇರೆ ವಿಷಯಕ್ಕೆ ಹೋಗಬೇಡಿ, ಇದಕ್ಕೆ ಅವಕಾಶ ಮಾಡಿ ಕೊಡಿ ಎಂದು ಹೇಳಿರಿ.

ಶ್ರೀ ಆರ್. ವೆಂಕಟರಾಮಯ್ಯ.—ಗೂಂಡಾ ಆಕ್ಟ್ ಅಮೆಂಡ್ ಮಾಡಿ, ಇಂತಹ ಸಮಾಜ ಘಾತಕರನ್ನು ಅಲ್ಲಿಂದ ಉಚ್ಚಾಟಿಸಲು ಏನಾದರೂ ಪ್ರಯತ್ನ ಮಾಡುತ್ತೀರಾ ? ಇಲ್ಲದೇ ಹೋದರೆ ಇದೇ ರೀತಿ ನಡೆಯುತ್ತಿರುತ್ತದೆ. ಬೆಂಡಿಗೇರಿಯಲ್ಲಿ ಆಯಿತು, ಇನ್ನೊಂದು ದಿವಸ ತತ್ತೂರಿನಲ್ಲಿ ಆಯಿತು ಎಂದು ಇದನ್ನು ಹೀಗೇ ಬಿಡುತ್ತೀರಾ ?

ಅಧ್ಯಕ್ಷರು :—ಅವಕಾಶ ಮಾಡಿಕೊಡಿ ಎಂದು ಕೇಳಿರಿ, ಅದರ ಮೆರಿಟ್ಸ್ ಆಮೇಲೆ ಹೇಳುವಿರಂತೆ.

ಶ್ರೀ ಆರ್. ವೆಂಕಟರಾಮಯ್ಯ:—ನಿಮ್ಮ ಪಿಪ್ಪೇಸ್ವಾಮಿಯವರನ್ನು ಅಲ್ಲಿಗೆ ಕಳುಹಿಸಿ ಡೀಟೇಲ್ ಎನ್‌ಕ್ವೈರಿ ಮಾಡಿಸುತ್ತೀರಾ ? ಇದು ಬಹಳ ಮುಖ್ಯವಾದ ವಿಷಯ, ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು:—ಇದರ ಮೆರಿಟ್ಸ್ ತೆಗೆದುಕೊಂಡು ಡಿಸ್‌ಪ್ಯೂಸ್ ಆಫ್ ಮಾಡಲೇ ? ಅಥವಾ ಚರ್ಚೆಗೆ ಅವಕಾಶ ಮಾಡಿಕೊಡಬೇಕೇ ? ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಮಾತ್ರ ಹೇಳಿ ಸಾಕು ; ಈಗ ಕೃಷ್ಣನ್‌ರವರೇ, ತಾವು ಮಾತನಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಚರ್ಚೆಗೆ ನಾಲ್ಕು ಕಾರಣಗಳಿಗಾಗಿ ಅವಕಾಶ ಮಾಡಿ ಕೊಡಬೇಕೆಂದು ಕೇಳುತ್ತೇನೆ. ಒಂದು ಏನೆಂದರೆ, ಈ ತರಹದ ಘಟನೆಗಳು, ಪದೇ ಪದೇ ನಡೆಯುತ್ತಿವೆ

ಇದು ಹೊಸದಲ್ಲ, ಅದು ತಮಗೂ ಗೊತ್ತಿದೆ. ಅದರಲ್ಲೂ ತಮಗೆ ಗೊತ್ತಿರುವ ಹಾಗೆ ಇದು ಬಹಳ ಅಪಮಾನಕರವಾದ ಘಟನೆ. ಪತ್ರಿಕೆಯಲ್ಲಿ ಬಂದಿರುವಹಾಗೆ ''ಈ ಸೂಳೆಮಗನಿಗೆ ಹೇಸಿಗೆ ಹಚ್ಚಿದ ಚಪ್ಪಲಿ ತಂದು ಬಾಯಿಗೆ ಇಡ್ರೊ ಎಂದಾಗ ಮಲ್ಲಿಕಾರ್ಜುನ ಎನ್ನುವವನು ಅದೇ ರೀತಿ ಮಲ ಹಚ್ಚಿದ ಚಪ್ಪಲಿಯನ್ನು ತಂದು ತಿನ್ನು ತಿನ್ನು ಸೂಳೆಮಗನೆ'' ಎಂದು ಹೇಳಿ ಬಾಯಿಗೆ ಇಟ್ಟರು, ಈತ ಹೇಸಿಗೆ ವಾಸನೆಯನ್ನು ತಡೆಯಲಾರದೆ ಚಪ್ಪಲಿಯನ್ನು ಬಾಯಿಗೆ ಇಡುವುದನ್ನು ಪ್ರತಿಭಟಿಸಿದ ಎಂದು ವರದಿಯಾಗಿದೆ.

ಅಧ್ಯಕ್ಷರು.—ತಾವು ವಿವರಕ್ಕೆ ಹೋಗಬೇಡಿ

ಶ್ರೀ ಎಂ. ಎಸ್. ಕೃಷ್ಣನ್.—ಪತ್ರಿಕೆಗಳಲ್ಲಿ ಎಲ್ಲಾ ಬಂದಿದೆ. ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ —ಒಂದು ಪತ್ರಿಕೆಯಲ್ಲಿ ಕ್ವಶ್ಚನ್ ಮಾರ್ಕ್ ಹಾಕಿದ್ದಾರೆ. ಈ ಬಗ್ಗೆ ನನಗೆ ಅವಕಾಶ ಮಾಡಿ ಕೊಟ್ಟರೆ ಸಾಯಂಕಾಲದ ವೇಳೆಗೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಪೂರ್ತಿಯಾಗಿ ಹೇಳುವುದಿಲ್ಲ, ಯಾವ ತರಹ ಪತ್ರಿಕೆಗಳಲ್ಲಿ ಬಂದಿ . ಇದು ಬಹಳ ಗಂಭೀರವಾದ ಸಮಸ್ಯೆ .....

ಅಧ್ಯಕ್ಷರು.—ನೀವು ಮೆರಿಟ್‌ಗೆ ಹೋಗಬೇಡಿ. ಅವಕಾಶ ಮಾಡಿಕೊಡಬೇಕೆಂದಷ್ಟೇ ಹೇಳಿ ಸಾಕು.

ಶ್ರೀ ಎಂ. ಎಸ್. ಕೃಷ್ಣನ್.—ಎರಡನೇ ಕಾರಣ ಬಂದಿರುವುದು ಲ್ಯಾಂಡ್ ರಿಫಾರಮ್ಸ್‌ನಲ್ಲಿ ಈ ಹರಿಜನ ಮತ್ತು ಗಿರಿಜನರಿಗೆ ತೊಂದರೆ ಕೊಡ ತ್ತಿರುವ ಬಗ್ಗೆ. ಇದು ದಿನೇ ದಿನೇ ಜಾಸ್ತಿಯಾಗುತ್ತಿದೆ. ಪೋಲೀಸಿನವರು ಸರಿಯಾಗಿ ಆಕ್ಟ್ ಮಾಡಿಲ್ಲ. ಇದರಿಂದ ನಮಗೇನು ತೋರುತ್ತದೆ ಎಂದರೆ, ಇದು ಸರ್ಕಾರದ ವಿಫಲತೆಯನ್ನು ಎತ್ತಿ ತೋರಿಸುತ್ತದೆ, ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ಅಧ್ಯಕ್ಷರೆ ಚರ್ಚೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವಿಷಯವೆಲ್ಲಾ ನಿಜವೆಂದು ಮಾನ್ಯ ಸದಸ್ಯರು ಭಾವಿಸಿಕೊಳ್ಳುವುದಾದರೆ ಅದು ಸರಿಯಲ್ಲ. ಮಂಧ್ಯಾಹ್ನ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದ ಕೂಡಲೇ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು, ನಾನು ಉತ್ತರ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

ಅಧ್ಯಕ್ಷರು.—ಸಿ ಜನ ಮಾನ್ಯ ಸದಸ್ಯರು ತಂದಂಥ ನಿಲುವಳಿ ಸೂಚನೆಗೆ ಅನುಮತಿಯನ್ನು ನಾನು ನಿರಾಕರಿಸಿದ್ದೇನೆ. ನಿಯಮ ೬೮ರ ಪ್ರಕಾರ ಇದರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಚರ್ಚೆಯನ್ನು ಇವತ್ತೇ ತೆಗೆದುಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವುದಕ್ಕಿಂತ ಮುಂಚಿತವಾಗಿಯೇ ಇದನ್ನು ತೆಗೆದುಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

೧. ರಾಜ್ಯದ ವಿವಿಧ ಸರ್ಕಾರಿ ಶಾಲೆಗಳಲ್ಲಿ ನೂರಾರು ಶಿಕ್ಷಕರು ಸೇವೆಯಲ್ಲಿ ಖಾಯಂ ಆಗದೆ ತೊಂದರೆಗೊಳಗಾಗಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ರಾಜ್ಯದ ವಿವಿಧ ಸರ್ಕಾರಿ ಶಾಲೆಗಳಲ್ಲಿ ನೂರಾರು ಶಿಕ್ಷಕರು ಸೇವೆಯಲ್ಲಿ ಖಾಯಂ ಆಗದೆ ತೊಂದರೆಗೊಳಗಾಗಿರುವ ಬಗ್ಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಾನ್ಯ ಶಿಕ್ಷಣ ರಾಜ್ಯ ಸಚಿವರು).—ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ೭೯೭೧ ಶಿಕ್ಷಕರು ಈ ಪದವಿ ಪೂರ್ವ ಪ್ರೌಢಶಾಲೆ, ಮತ್ತು ಪ್ರಾಥಮಿಕ ಶಾಲೆಗಳನ್ನೊಳಗೊಡಂತೆ. ಗುತ್ತಿಗೆ ಆಧಾರದ ಮೇಲೆ ಸೇವೆಯಲ್ಲಿ ಮುಂದುವರಿಯುತ್ತಾ ಬಂದಿರುತ್ತಾರೆ. ಈ ರೀತಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಪರಿಶೀಲಿಸಿ